


ಸುರೇಶನಿಗೆ ಬದುಕು ಎಂತಹ ಸವಾಲೊಡ್ಡುತ್ತದೆ ಎಂಬ ಅರಿವಿರಲಿಲ್ಲ.

ಇಸವಿ 1996, ಸುರೇಶ್ ಹತ್ತನೇ ತರಗತಿಯಲ್ಲಿ ಇದ್ದ ಸಮಯ. ಸುರೇಶನ ಕೈಗಳಲ್ಲಿ ಬಿಳಿಯ ಮಚ್ಚೆಗಳು ಕಾಣಿಸಿಕೊಂಡವು. ಅವು ಒಂದಿಷ್ಟು ಹೊಳೆಯುತ್ತಿದ್ದವು, ಮುಖ ಕೆಂಪಾಗಿತ್ತು. ಇದೆಲ್ಲೋ ಸಾಮಾನ್ಯವಾದ ಚರ್ಮರೋಗ ಇರಬೇಕು, ಹಾಗೆಯೇ ಹೋಗುತ್ತದೆ ಎಂದು ಹೆಚ್ಚು ಗಮನವನ್ನೇನೂ ಕೊಡಲಿಲ್ಲ. ಆದರೆ ಆ ಬಿಳಿಯ ಮಚ್ಚೆಗಳು ಮೆಲ್ಲನೆ ಹಿಗ್ಗುತ್ತಾ ಅಗಲವಾದಾಗ, ಒಂದಷ್ಟು ಉಬ್ಬಿ ನಿಂತಾಗ ಕೊಂಚ ಆತಂಕವಾಗಿ ತಂದೆಗೆ ತೋರಿಸಿದರು. ಹಳ್ಳಿಯಲ್ಲಿ ಆಸ್ಪತ್ರೆಯಾಗಲೀ, ಸರಿಯಾದ ವೈದ್ಯರಾಗಲಿ ಇರಲಿಲ್ಲ. ತಂದೆ ತಮ್ಮ ಮೌಢ್ಯದಲ್ಲಿ ಮಗನನ್ನು ಡೋಂಗಿ ವೈದ್ಯನಲ್ಲಿಗೆ ಕರೆದೊಯ್ದರು. ಆತ ಕೋಳಿ ಬಲಿ ಕೊಟ್ಟು ಏನೇನೋ ಪೂಜೆ ಪುನಸ್ಕಾರ ಮಾಡಲು ಹೇಳಿ, 'ಆರು ತಿಂಗಳು ಕಾಯಿರಿ, ಸಂಪೂರ್ಣ ಗುಣವಾಗುತ್ತದೆ' ಎಂದು ಭರ್ಜರಿ ಆಶ್ವಾಸನೆ ಕೊಟ್ಟನು. ಆರು ತಿಂಗಳೇನೋ ಕಳೆಯಿತು, ರೋಗ ಗುಣವಾಗಲಿಲ್ಲ; ಬದಲಿಗೆ ಉಲ್ಬಣವಾಗಿತ್ತು. ಆರಂಭದಲ್ಲಿದ್ದ ರೋಗಕ್ಕೆ ಯಾವ ಚಿಕಿತ್ಸೆ ಇಲ್ಲದೆ ಅಮೂಲ್ಯವಾದ ಆರು ತಿಂಗಳುಗಳು ಕಳೆದುಹೋಗಿದ್ದವು.

ಈಗ ಸುರೇಶ್ ನೋಡುತ್ತಾರೆ, ಆ ಬಿಳಿ ಮಚ್ಚೆಗಳ ಜಾಗದಲ್ಲಿ ಸ್ಪರ್ಶಜ್ಞಾನವೇ ಇಲ್ಲ! ಮುಖವೂ ಸಾಕಷ್ಟು ಊದಿಕೊಂಡಿತ್ತು. ಆತನ ರೋಗ ಶಾಲೆಯಲ್ಲಿ ಎಲ್ಲರ ಗಮನಕ್ಕೆ ಬಂದಿತ್ತು. ಆತನ ಶಿಕ್ಷಕರು, ಸಹಪಾಠಿಗಳು 'ನಿನಗೆ ಬಂದಿರುವ ರೋಗವೇನು?' ಎಂದು ವಿಚಾರಿಸತೊಡಗಿದ್ದರು. ಅದೇನೆಂದು ಸುರೇಶನಿಗೂ ತಿಳಿದಿರಲಿಲ್ಲ. ಸುರೇಶ್ ಆಗ 11ನೇ ತರಗತಿ ವಿದ್ಯಾರ್ಥಿ.




ಪುಣೆಯಲ್ಲಿರುವ 'ಡಾ. ಭಂಡೋರವಾಲಾ ಸರಕಾರಿ ಕುಷ್ಠರೋಗದ ಆಸ್ಪತ್ರೆ'

ಅಸಹನೀಯ ವಾತಾವರಣ ಸೃಷ್ಟಿಯಾಗಿ ಶಾಲೆಯಲ್ಲಿ ಉಳಿಯುವುದೇ ಕಷ್ಟವಾಯಿತು. ಅದೇ ಸಮಯದಲ್ಲಿ ಅವರ ಮೂಗಿಗೆ ಸೋಂಕು ತಗುಲಿತು. ಗಾಬರಿಯಾದ ತಂದೆ ಮಗನನ್ನು ದೂರದ ಬುಲ್ಢಾನಾ ನಗರಕ್ಕೆ ಕರೆದೊಯ್ದರು. ಅಂದು ಅದು ಸುಮಾರು 75 ಕಿ.ಮೀ. ದೂರದಲ್ಲಿದ್ದ ಬಳಸು ಹಾದಿ. ಅಲ್ಲಿ ಓರ್ವ ಕಿವಿ–ಮೂಗು–ಗಂಟಲು ತಜ್ಞರಿಗೆ ತೋರಿಸಿದರು. ಸುರೇಶ್ ಅವರ ಚರ್ಮದ ಮೇಲಿನ ಬದಲಾವಣೆಗಳನ್ನು ಕಂಡ ಅವರು ತಂದೆಗೆ ಚರ್ಮರೋಗ ತಜ್ಞರಾದ ಡಾ. ಅಶೋಕ್ ವಾಘ್ ಅವರನ್ನು ಭೇಟಿಯಾಗಲು ಹೇಳಿದರು. ಡಾ. ಅಶೋಕ್ 'ಇದು ಕುಷ್ಠರೋಗ'ವೆಂದು ಹೇಳಿದೊಡನೆ ಎದೆ ಕುಸಿದು ಹೋಯಿತು. ಭವಿಷ್ಯದ ಕನಸುಗಳೆಲ್ಲ ಅರೆಕ್ಷಣದಲ್ಲಿ ಉರಿದು ಬೂದಿಯಾಗಿದ್ದವು. ಡಾ. ಅಶೋಕ್ ತಕ್ಷಣವೇ ಮಗನನ್ನು ಕುಷ್ಠರೋಗದ ಆಸ್ಪತ್ರೆಗೆ ಸೇರಿಸಲು ತಂದೆಗೆ ಸಲಹೆ ನೀಡಿದರು.

ಇದು ಹೇಳಿದಷ್ಟು ಸುಲಭವಿರಲಿಲ್ಲ. ಹಳ್ಳಿಯಲ್ಲಿ ಹಿರಿಯ ಮಗ ಕುಷ್ಠರೋಗಿ ಎಂದು ಗೊತ್ತಾದರೆ, ಇಡೀ ಕುಟುಂಬವನ್ನೇ ಅಸ್ಪೃಶ್ಯರಂತೆ ಕಂಡು ಬಹಿಷ್ಕರಿಸುತ್ತಾರೆ. ಮೂವರು ಹೆಣ್ಣು ಮಕ್ಕಳಿಗೆ ಮದುವೆ ಹೇಗೆ ಆಗಬಲ್ಲದು? ಕುಷ್ಠರೋಗದ ಆಸ್ಪತ್ರೆಗೆ ಸೇರಿಸುವುದು ಬೇಡವೆಂದು ಆ ಅಸಹಾಯಕ ತಂದೆ ನಿರ್ಧರಿಸಿದರು. ಮಗನ ಕಾಯಿಲೆಯನ್ನು ಗುಟ್ಟಾಗಿ ಇಟ್ಟರು. ಮನೆಯಲ್ಲಿಯೇ ಸುರೇಶ್ ವೈದ್ಯರು ನೀಡಿದ ಔಷಧಿಗಳನ್ನು ತೆಗೆದುಕೊಳ್ಳತೊಡಗಿದರು. ಆದರೆ ಇದು ಕುಷ್ಠರೋಗದ ಆಸ್ಪತ್ರೆಯಲ್ಲಿ ಸಿಗುವ ಶಿಸ್ತಿನ ನಿಯಮಿತ ಚಿಕಿತ್ಸೆ ಆಗಿರಲಿಲ್ಲ. ರೋಗ ಗುಣವಾಗಲು ಚಿಕಿತ್ಸೆ ಸತತವಾಗಿ ಜಾರಿಯಲ್ಲಿರಬೇಕಾದ ಅಗತ್ಯವಿತ್ತು. ಹಣದ ಕೊರತೆಯಿಂದಾಗಿ ದೂರದ ಬುಲ್ಢಾನಾಗೆ ಹೋಗಿ ಔಷಧಿ ಪಡೆದು ಬರುವುದು ಕೆಲವೊಮ್ಮೆ ತಡವಾಗುತ್ತಿತ್ತು. ಸುರೇಶ್ ಆಗಿನ್ನೂ ಚಿಕ್ಕ ಹುಡುಗ. ಕುಷ್ಠರೋಗ ನಿವಾರಣೆಯ ಔಷಧಿಯೊಡನೆ ಕೆಲವು ಸಪೋರ್ಟಿವ್ ಮೆಡಿಸಿನ್ ಕೂಡಾ ಇದ್ದವು. ಅವನ್ನು ನಿರ್ದಿಷ್ಟ ಕಾಲದವರೆಗೂ ಗೊತ್ತಾದ ವಿಧಾನದಲ್ಲಿ ತೆಗೆದುಕೊಳ್ಳಬೇಕಿತ್ತು. ಇದು ತಿಳಿದಿರದೆ ಸುರೇಶ್ ಅವುಗಳನ್ನು ನಿಲ್ಲಿಸಿಬಿಟ್ಟಿದ್ದರು.

ಇಷ್ಟರಲ್ಲಾಗಲೇ ಶಿಕ್ಷಕರು ಮತ್ತು ಸಹಪಾಠಿಗಳು ಕೇಳುವ ನೂರೊಂದು ಪ್ರಶ್ನೆಗಳಿಂದ ತಪ್ಪಿಸಿಕೊಳ್ಳಲು ಸುರೇಶ್ ಶಾಲೆ ಬಿಟ್ಟದ್ದಾಗಿತ್ತು. ಸುಮಾರು ಒಂದೂವರೆ ವರ್ಷಗಳ ಕಾಲ ಮನೆಯಲ್ಲಿ ಉಳಿದು ಬಿಟ್ಟಿದ್ದರು. ಅವರ ರೋಗ ಗುಣವಾಗಲಿಲ್ಲ. ಸರಿಯಾದ ಚಿಕಿತ್ಸೆ ಇಲ್ಲದೆ ರೋಗ ಬಿಗಡಾಯಿಸಿತ್ತು; ಕೈ ಬೆರಳುಗಳು ತಿರುಚಿ ಒಳಬಾಗಿ ಡೊಂಕಾಗುತ್ತಾ ವಿರೂಪಗೊಳ್ಳತೊಡಗಿದ್ದವು. ದೇಹ ಕುಸಿದಿತ್ತು. 1998ರ ಸೆಪ್ಟೆಂಬರ್ ತಿಂಗಳ ಹೊತ್ತಿಗೆ ಪೂರ್ಣ ಹಾಸಿಗೆ ಹಿಡಿದುಬಿಟ್ಟರು. ಹಳ್ಳಿಯ ಮನೆಯಲ್ಲಿ ಶೌಚಾಲಯವಿರಲಿಲ್ಲ. ಶೌಚಕ್ಕೆ ಸುಮಾರು ಅರ್ಧ ಕಿಲೋಮೀಟರ್ ದೂರಕ್ಕೆ ಹೋಗಬೇಕಿತ್ತು. ಚಳಿಗಾಲದ ದಿನಗಳು ಬೇರೆ. ನಿತ್ರಾಣರಾದ ಸುರೇಶ್, ಶೌಚಕ್ಕೆ ಹೋಗುವುದನ್ನು